# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಹಿರಿಯೂರು

## ಸಿ.ಸಿ ಸಂಖ್ಯೆಃ 1208/2024

| | | | |
|---|---|---|---|
| ಸಾಕ್ಷಿದಾರರ ಹೆಸರು | – | ದೇವರಾಜ್ | ಸಿಡಬ್ಲ್ಯೂ–5 |
| ತಂದೆಯ/ಗಂಡನ ಹೆಸರು | – | ಚಲುವಯ್ಯ | ಪಿಡಬ್ಲ್ಯೂ–4 |
| ವಯಸ್ಸು | – | ಸು. 49 ವರ್ಷ | ಪ್ರ.ವ.ಬೋ<br>ದಿನಾಂಕಃ01.08.2025 |
| ಉದ್ಯೋಗ | – | ಪೌರ ಕಾರ್ಮಿಕರು, ನಗರಸಭೆ,<br>ಹಿರಿಯೂರು. | |
| ವಾಸ | – | ಹಿರಿಯೂರು ನಗರ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ–**

1. ನಾನು 28 ವರ್ಷಗಳಿಂದ ನಗರಸಭೆ, ಹಿರಿಯೂರಿನಲ್ಲಿ ಪೌರ ಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಚಾಸಾ–1 ರಿಂದ 4, 6 ರಿಂದ 9 ರವರ ಪರಿಚಯ ಇರುತ್ತದೆ. ಆರೋಪಿ ಪರಿಚಯ ಇರುವುದಿಲ್ಲ. ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಗರಸಭೆ ಕಛೇರಿ ಮುಂದೆ ಗಲಾಟೆ ನಡೆಯುತ್ತಿತ್ತು. ಗಲಾಟೆ ನಡೆಯುವಾಗ ತುಂಬಾ ಜನರು ಸೇರಿದ್ದರು ಆದ್ದರಿಂದ ಗಲಾಟೆ ಯಾರ ಯಾರ ಮಧ್ಯ ನಡೆಯುತ್ತಿತ್ತು ಎಂದು ನನಗೆ ಗೊತ್ತಾಗಲಿಲ್ಲ. ಪೊಲೀಸ್‌ರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಪೊಲೀಸ್‌ರಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ–ಸವಾಲಿನಲ್ಲಿ ಕೇಳುವ ಪ್ರಶ್ನೆಗಳನ್ನು ಕೇಳಲು ಅನುಮತಿ ನೀಡಲಾಯಿತು).

**ಪಾಟೀ–ಸವಾಲುಃ ಮಾನ್ಯ ಎಪಿಪಿಯವರಿಂದಃ–**

3. ದಿನಾಂಕಃ08.04.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ನಗರಸಭೆ ಕಟ್ಟಡದ ಬಳಿ ಚಾಸಾ–1 ಮತ್ತು ಆರೋಪಿ ನಡುವೆ ಗಲಾಟೆ ನಡೆಯುತ್ತಿತ್ತು ಎಂದರೆ ಸರಿಯಲ್ಲ.

ಆರೋಪಿ ಚಾಸಾ-1 ರವರಿಗೆ ಸೂಳೆಮಗನೇ ಬೋಳಿಮಗನೆ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚಾಸಾ-1 ರವರ ಎಡಕೆನ್ನೆಗೆ ಹೊಡೆದು ಮೈಕೈಗೆ ಹೊಡೆದಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಚಾಸಾ-1 ರವರಿಗೆ ಆರೋಪಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯೇ ಸದರಿ ದಿನ ಗಲಾಟೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಈಗ ಮೇಲೆ ಓದಿ ಹೇಳಿದಂತೆ ದಿನಾಂಕಃ08.04.2024 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ-4** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ-ಸವಾಲುಃ ಆರೋಪಿ ಪರ ಶ್ರೀ ಎಸ್.ಟಿ.ಎಸ್. ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.